ಮೈಸೂರಿನ ಚಾಮರಾಜನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಶುವೈದ್ಯ ಆಸ್ಪತ್ರೆಗಳು

2315- ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರಿನ ಚಾಮರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಶುವೈದ್ಯ ಆಸ್ಪತ್ರೆಗಳು ಯಾವುವು?*

ಆ) *ಮೈಸೂರಿನ ಕುಂಬಾರಕೊಪ್ಪಲಿನಲ್ಲಿನ ಪಶು ವೈದ್ಯ ಆಸ್ಪತ್ರೆಗೆ ಸ್ಥಳ ಮಂಜೂರಾಗಿದ್ದು, ಈ ಆಸ್ಪತ್ರೆಯ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?*

ಇ) *ಮೈಸೂರಿನ ತೊಣಚಿನಕೊಪ್ಪಲಿಗೆ ಪಶುವೈದ್ಯ ಆಸ್ಪತ್ರೆಯನ್ನು ಮಂಜೂರು ಮಾಡಬೇಕೆಂದು ಹಲವಾರು ಬಾರಿ ಮನವಿ ಮಾಡಿದರೂ ಸರ್ಕಾರ ಈ ಬಗ್ಗೆ ಗಮನ ಹರಿಸದಿರಲು ಕಾರಣಗಳೇನು?*

ಈ) *ತೊಣಚಿನಕೊಪ್ಪಲಿಗೆ ಪಶುವೈದ್ಯ ಆಸ್ಪತ್ರೆಯನ್ನು ಸರ್ಕಾರ ಮಂಜೂರು ಮಾಡುವುದೇ? ಈ ಬಗ್ಗೆ ಸರ್ಕಾರದ ನಿಲುವೇನು?*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1. ಪಶುವೈದ್ಯ ಆಸ್ಪತ್ರೆ, ಕೆ.ಜಿ.ಕೊಪ್ಪಲು

2. ಪಶುವೈದ್ಯ ಆಸ್ಪತ್ರೆ, ಕುಂಬಾರಕೊಪ್ಪಲು

3. ನಗರ ಆಸ್ಪತ್ರೆ, ಮೈಸೂರು

4. ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಪಡುವಾರಹಳ್ಳಿ.

ಆ) ಜಿಲ್ಲಾ ಪರಿಷತ್ತಿನಿಂದ ಕ್ರಿಯಾ ಯೋಜನೆಗೆ ಮಂಜೂರಾತಿ ಸಿಕ್ಕದ ನಂತರ ಸದರಿ ಆಸ್ಪತ್ರೆಯ ಕಾಮಗಾರಿ ಕೆಲಸವನ್ನು ಪ್ರಾರಂಭಿಸಲಾಗುವುದು.

ಇ) 1998-99ನೇ ಸಾಲಿನಲ್ಲಿ ಸದರಿ ಸ್ಥಳಕ್ಕೆ ಪಶುಚಿಕಿತ್ಸಾ ಕೇಂದ್ರವನ್ನು ಮಂಜೂರು ಮಾಡಲು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಈ) ಮೇಲೆ ಉತ್ತರಿಸಲಾಗಿದೆ.

ಗುಬ್ಬಿ ಕ್ಷೇತ್ರಕ್ಕೆ ನಬಾರ್ಡ್ ಯೋಜನೆಯಡಿಯಲ್ಲಿ ಮಂಜೂರಾಗಿರುವ ಹಣ

2316 - ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಬ್ಬಿ ಕ್ಷೇತ್ರಕ್ಕೆ ನಬಾರ್ಡ್ ಯೋಜನೆಯಡಿಯಲ್ಲಿ ಇಲ್ಲಿಯವರೆವಿಗೆ ಮಂಜೂರಾದ ಹಣವೆಷ್ಟು?*

ಅ) ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಹಣ ಮಂಜೂರಾಗಿರುತ್ತದೆ.

ಇ) 1997-98ರಲ್ಲಿ ಕಲ್ಲೂರಿನಿಂದ ಕಲ್ಲೂರು ಶ್ರೀರಾಮ ದೇವಸ್ಥಾನದವರೆಗೆ ರಸ್ತೆ ಡಾಂಬರೀಕರಣ ಕೆಲಸವನ್ನು ಪೂರೈಸಲಾಗಿದೆಯೇ? ಇದಕ್ಕಾಗಿ ಒದಗಿಸಲಾದ ಹಣವೆಷ್ಟು?

ಈ) ಇದೇ ರೀತಿ ಕಲ್ಲೂರಿನಿಂದ ಯಡಿಯೂರಿಗೆ ರಸ್ತೆ ಅಭಿವೃದ್ಧಿ ಪಡಿಸಲು ಮಂಜೂರು ಮಾಡಲಾದ ಹಣವೆಷ್ಟು? ಈ ಕೆಲಸವನ್ನು ಪೂರೈಸಲಾಗಿದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ತುಮಕೂರು ಜಿಲ್ಲೆಗೆ ಈವರೆವಿಗೆ 14.38 ಕೋಟಿ ರೂ.ಗಳು ಮಂಜೂರಾಗಿದೆ. ಇದರಲ್ಲಿ ಗುಬ್ಬಿ ಕ್ಷೇತ್ರಕ್ಕೆ ವಿಂಗಡಿಸಿದಲ್ಲಿ 69.94 ಲಕ್ಷ ರೂ. ಇದೆ.

	ಕಾಮಗಾರಿಯ ಹೆಸರು	ಮಂಜೂರಾದ ಹಣ ಲಕ್ಷ ರೂ.
1.	ನೆಲ್ಲಿಗೆರೆ ಶಿರಾ ರಸ್ತೆ ಅಭಿವೃದ್ಧಿ (ಭಾಗ)	13.35
2.	ನೆಲ್ಲಿಗೆರೆ ಶಿರಾ ರಸ್ತೆಯ ಕಿ.ಮೀ. 25.8ರಲ್ಲಿ ಸೇತುವೆ ನಿರ್ಮಾಣ	7.61
3.	ನೆಲ್ಲಿಗೆರೆ ಶಿರಾ ರಸ್ತೆಯ ಕಿ.ಮೀ 38.1ರಲ್ಲಿ ಸೇತುವೆ ನಿರ್ಮಾಣ	6.71
4.	ತುಮಕೂರು-ಹೊನ್ನಾವರ ರಸ್ತೆಯಿಂದ, ಎಲ್ಲಾಪುರ, ಹಂದನಹಳ್ಳಿ, ಹರದಗೆರೆ ಮುಖಾಂತರ ಚಿಕ್ಕನಾಯಕನಹಳ್ಳಿ ಹಾಗಲವಾಡಿ ರಸ್ತೆಗೆ ಸೇತುವೆ ರಸ್ತೆ ಅಭಿವೃದ್ಧಿ	15.00
5.	ಕಡಬಾ-ಕುನ್ನಾಲ ರಸ್ತೆ ಅಭಿವೃದ್ಧಿ	27.27

ಇ) ಇಲ್ಲ. ಈ ಕಾಮಗಾರಿಗೆ 11.30 ಲಕ್ಷ ರೂ. ಒದಗಿಸಲಾಗಿದ್ದು, ಕಾಮಗಾರಿಯನ್ನು ಕೈಬಿಡಲಾಗಿದೆ.

ಈ) ಈ ರಸ್ತೆಯ ಗುಬ್ಬಿ ಕ್ಷೇತ್ರದ ಭಾಗವು ಮಂಜೂರಾಗಿರುವುದಿಲ್ಲ.

ಉಡುಪಿಯಲ್ಲಿ ವಾರ್ತಾ ಇಲಾಖೆಯ ಜಿಲ್ಲಾ ಕಛೇರಿ ತೆರೆಯುವುದು.

2318 -ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾರ್ತಾ ಇಲಾಖೆಯ ಜಿಲ್ಲಾ ಕಛೇರಿಯನ್ನು ಉಡುಪಿಯಲ್ಲಿ ಯಾವಾಗ ತೆರೆಯಲಾಗುವುದು?

ಆ) ಜಿಲ್ಲಾ ಕಛೇರಿಯನ್ನು ತೆರೆಯಲು ವಿಳಂಬವೇನು?